**ಸಾಕ್ಷಿಯನ್ನು ದಿನಾಂಕ 11-02-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ.ಎನ್.ಎಸ್ ವಕೀಲರಿಂದಃ**

1. ನಾನು ತರೀಕೆರೆ ನ್ಯಾಯಾಲಯದಲ್ಲಿ ಜವಾನರಾಗಿ 12 ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ಈ ದಾವೆ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ವಾದಿಯರು ನನ್ನ ಕುಟುಂಬಕ್ಕೆ ಕಳೆದ 30 ವರ್ಷದಿಂದ ಪರಿಚಯವಿದ್ದಾರೆ. ವಾದಿಯರು ಗೌಡಿಕ ಸಮುದಾಯಕ್ಕೆ ಸೇರಿದವರು ಎಂದರೆ ಸರಿ. ನಾನು ಒಕ್ಕಲಿಗ ಸಮುದಾಯಕ್ಕೆ ಸೇರಿದ್ದೇನೆ. ನಾನು ಮತ್ತು ವಾದಿಯರು ಸಂಬಂಧಿಕರು ಎಂದರೆ ಸರಿ.

2. ವಾದಿಯರಿಗೆ ದಾವಾ ಸ್ವತ್ತು 1995-96 ನೇ ಸಾಲಿನಲ್ಲಿ ಸರ್ಕಾರದಿಂದ ಮಂಜೂರಾಗಿತ್ತು. ಸದರಿ ಸ್ವತ್ತಿನ ಖಾತೆ-ಪಹಣಿ ದಾಖಲೆಗಳು ವಾದಿಯರ ಹೆಸರಿಗೆ ಇದೆ. ದಾವಾ ಸ್ವತ್ತಿನಲ್ಲಿನ ತಮ್ಮ ಸ್ವಾಧೀನಕ್ಕೆ ಪ್ರತಿವಾದಿ ತೊಂದರೆ ಕೊಟ್ಟಿದ್ದರಿಂದ ವಾದಿಯರು ನಿರ್ಬಂಧಕಾಜ್ಞೆ ಕೋರಿ ಈ ದಾವೆ ಸಲ್ಲಿಸಿದ್ದಾರೆ. ಪ್ರತಿವಾದಿ ಭದ್ರಾವತಿ ಪಟಣ್ಣ ಗಾಂಧಿ ನಗರದಲ್ಲಿ ವಾಸವಿದ್ದಾರೆ. ವಾದಿ-ಪ್ರತಿವಾದಿಯರಿಗೆ ಹೇಗೆ ಪರಿಚಯ ಎಂಬ ಪ್ರಶ್ನೆಗೆ ಸಾಕ್ಷಿ ಪ್ರತಿವಾದಿಗೆ ದಾವಾ ಸ್ವತ್ತು ಇರುವ ನೆಟ್ಟಕಲ್ಲಿ ಗ್ರಾಮದಲ್ಲಿ ಜಮೀನು ಇದೆ ಎನ್ನುತ್ತಾರೆ. ಅವರಿಗೆ ಸುಮಾರು 10 ಎಕರೆ ಜಮೀನು ಇದೆ, ಸರ್ವೆ ನಂಬರ್ ಗೊತ್ತಿಲ್ಲ. ಆ ಸಂಬಂಧ ನನಾು ದಾಖಲೆಯನ್ನು ನೋಡಿದ್ದೇನೆ.

3. ವಾದಿಯರ ವಿರುದ್ಧ ಅಸಲು ದಾವೆ ಸಂಖ್ಯೆ 397/2022 ರಂತೆ ಪ್ರತಿವಾದಿ ಭದ್ರಾವತಿ 2 ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹಾಕಿದ್ದಾರೆ ಎಂದರೆ ಸರಿ. ಸದರಿ ದಾವೆಯ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ. ಸದರಿ ದಾವೆ ಬಗ್ಗೆ ವಾದಿಯರು ನನಗೆ ಹೆಚ್ಚಿನ ಮಾಹಿತಿ ಕೊಟ್ಟಿಲ್ಲ. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು-ಬರೆಯಲು ಬರುತ್ತದೆ. ಅಸಲು ದಾವೆ ಸಂಖ್ಯೆ 397/22 ರ ದಾವೆ ಈಗಲೂ ಚಾಲ್ತಿಯಲ್ಲಿದೆ ಎನ್ನುವುದು ನನಗೆ ಗೊತ್ತಿಲ್ಲ.

4. ದಿನಾಂಕ 11.07.2017 ರಂದು ದಾವಾ ಸ್ವತ್ತನ್ನು ಮಾರಾಟ ಮಾಡುವ ಸಲುವಾಗಿ ವಾದಿಯರು ಪ್ರತಿವಾದಿಯ ಪರವಾಗಿ ಒಂದು ಕ್ರಯ ಕರಾರು ಒಪ್ಪಿಗೆ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿ ಪ್ರತಿವಾದಿ ಬಡ್ಡಿಗೆ ಸಾಲ ಕೊಟ್ಟು ಅದರ ಭದ್ರತೆಗಾಗಿ ವಾದಿಯರಿಂದ ಕ್ರಯ ಕರಾರು ಪತ್ರ ಬರೆಸಿಕೊಂಡಿದ್ದರು ಮತ್ತು ವಾದಿಯರು ಪಡೆದುಕೊಂಡಿದ್ದ ಸಾಲವನ್ನು ಬಡ್ಡಿ ಸಮೇತ ಪ್ರತಿವಾದಿಗೆ ತೀರುವಳಿ ಮಾಡಿದ್ದಾರೆ ಎನ್ನುತ್ತಾರೆ. ಕ್ರಯ ಕರಾರು ಎಷ್ಟು ಮೊತ್ತಕ್ಕೆ ಆಗಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ರೂ.2 ಲಕ್ಷಕ್ಕೆ ಆಗಿತ್ತು ಎನ್ನುತ್ತಾರೆ. ಆನಂದ, ಬಾಬು ಮತ್ತು ಮಂಜುಳ ಎಂಬುವವರು ವಾದಿಯರ ಮಕ್ಕಳು. ವಾದಿಯರು ಮತ್ತು ಅವರ ಮಕ್ಕಳು ದಾವಾ ಸ್ವತ್ತಿನ ಸಂಬಂಧ ದಿನಾಂಕ 26.11.2015 ರಂದು ಪ್ರತಿವಾದಿಯ ಪರವಾಗಿ ನೊಂದಾಯಿತ ಕ್ರಯ ಕರಾರು ಪತ್ರ ಮಾಡಿಕೊಟ್ಟಿದ್ದರು ಎಂದರೆ ಸರಿ. ಸದರಿ ನೊಂದಾಯಿತ ಕ್ರಯ ಕರಾರಿನಲ್ಲಿ ದಾವಾ ಸ್ವತ್ತಿನ ಸ್ವಾಧೀನವನ್ನು ಪ್ರತಿವಾದಿಗೆ ಬಿಟ್ಟು ಕೊಡಲಾಗಿದೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ವಾದಿಯರಿಗೆ ಓದು-ಬರಹ

ಬರುವುದಿಲ್ಲ ಮತ್ತು ಪ್ರತಿವಾದಿ ನೊಂದಣಿ ಕಚೇರಿಗೆ ವಾದಿಯರನ್ನು ಕರೆದುಕೊಂಡು ಹೋಗಿ ಕರಾರು ಪತ್ರ ಮಾಡಿಸಿಕೊಂಡಿದ್ದಾರೆ ಎನ್ನುತ್ತಾರೆ. ಸದರಿ ಕರಾರು ಪತ್ರಕ್ಕೆ 1 ನೇ ವಾದಿ ಹೆಬ್ಬೆಟ್ಟಿನ ಗುರುತು ಹಚ್ಚಿದ್ದು ಆತನ ಹೆಂಡತಿ ಮತ್ತು ಮಕ್ಕಳು ಸಹಿ ಮಾಡಿದ್ದಾರೆ ಎಂದರೆ ಸರಿ.

5. ಸಾಮಾನ್ಯವಾಗಿ ಯಾರೇ ದಾಖಲೆಗೆ ಸಹಿ ಮಾಡುವಾಗ ಅದರಲ್ಲಿ ಏನು ಬರೆದಿದೆ ಎಂದು ತಿಳಿದುಕೊಳ್ಳುತ್ತಾರೆ ಎಂದರೆ ಸರಿ. ಸಾಕ್ಷಿ ಸ್ವ ಇಚ್ಚೆಯಿಂದ ವಾದಿಯರು ಪ್ರತಿವಾದಿಯಿಂದ ಪಡೆದ ಸಾಲದ ಭದ್ರತೆಗಾಗಿ ಕ್ರಯ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎನ್ನುತ್ತಾರೆ. ನೊಂದಾಯಿತ ಕ್ರಯ ಕರಾರು ಪತ್ರದ ಆಧಾರದ ಮೇಲೆ ವಾದಿಯರು ದಿನಾಂಕ 26.11.2015 ರಲ್ಲೇ ದಾವಾ ಸ್ವತ್ತಿನ ಸ್ವಾಧೀನವನ್ನು ಪ್ರತಿವಾದಿಗೆ ಬಿಟ್ಟು ಕೊಟ್ಟಿದ್ದು ಅಂದಿನಿಂದ ಇಲ್ಲಿಯವರೆಗೂ ಪ್ರತಿವಾದಿಯರೇ ಸದರಿ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯೇ ದಾವಾ ಸ್ವತ್ತಿನ ಸ್ವಾಧೀನದಲ್ಲಿರುವ ವಿಷಯ ಗೊತ್ತಿದ್ದರೂ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಒಂದು ಶೆಡ್ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ವಾದಿಯರೇ ಕಟ್ಟಿದ್ದಾರೆ ಎನ್ನುತ್ತಾರೆ. ಈಗ ನನಗೆ ತೋರಿಸಲಾದ ಫೋಟೋದಲ್ಲಿ ಸದರಿ ಶೆಡ್ ಕಾಣುತ್ತದೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ಫೋಟೋವನ್ನು **ನಿಡಿ-1 ಮತ್ತು 2** ಎಂದು ಗುರುತಿಸಲಾಯಿತು. ನಿಡಿ-1 ಮತ್ತು 2 ರ ಫೋಟೋಗಳಲ್ಲಿ ಪ್ರತಿವಾದಿಯ ಭಾವಚಿತ್ರ ಇದೆ ಎಂದರೆ ಸರಿ. ಸಾಕ್ಷಿ ಪುನಃ ವಾದಿಯರು ಕೂಲಿ ಕೆಲಸಕ್ಕೆ ಹೋಗಿದ್ದಾಗ

ಪ್ರತಿವಾದಿ ದಾವಾ ಸ್ವತ್ತಿಗೆ ಹೋಗಿ ನಿಡಿ–1 ಮತ್ತು 2 ರ ಫೋಟೋ ತೆಗೆದಿದ್ದಾರೆ ಎನ್ನುತ್ತಾರೆ. ವಾದಿಯರ ಅನುಪಸ್ಥಿತಿಯಲ್ಲಿ ದಾವಾ ಸ್ವತ್ತಿನ ಬಳಿ ಹೋದ ಪ್ರತಿವಾದಿಯ ವಿರುದ್ಧ ವಾದಿಯರು ದೂರು ಕೊಟ್ಟಿದ್ದಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಕೊಟ್ಟಿದ್ದರೂ ಆದರೆ ಪೊಲೀಸರು ದೂರು ದಾಖಲಿಸಿಕೊಂಡಿಲ್ಲ ಎನ್ನುತ್ತಾರೆ. ದೂರು ಯಾವಾಗ ಕೊಟ್ಟಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ದಿನಾಂಕ 28.06.2022 ರಂದು ಕೊಟ್ಟಿದ್ದಾರೆ ಎನ್ನುತ್ತಾರೆ. ಸದರಿ ದೂರಿಗೆ ಸಂಬಂಧಪಟ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಸಾಕ್ಷಿ ಪುನಃ ಪೊಲೀಸರು ದೂರನ್ನು ವಾಪಸ್ಸು ಕೊಟ್ಟಿದ್ದಾರೆ ಎನ್ನುತ್ತಾರೆ. ನಂತರ ವಾದಿಯರು ಜಿಲ್ಲಾ ಪೊಲೀಸವರಿಷ್ಠಾಧಿಕಾರಿಗಳಿಗೆ ದೂರು ಕೊಡಲಿಲ್ಲ.

7. ಈಗ ನನಗೆ ತೋರಿಸಲಾದ ಮತ್ತೊಂದು ಫೋಟೋದಲ್ಲಿ ಪ್ರತಿವಾದಿಯ ಭಾವಚಿತ್ರ ಇದೆ ಮತ್ತು ಅದರಲ್ಲಿ ದಾವಾ ಸ್ವತ್ತಿನಲ್ಲಿ ಕಟ್ಟಲಾದ ಶೆಡ್ ನ ಚಿತ್ರ ಇದೆ ಎಂದರೆ ಸರಿ. ಸದರಿ ಫೋಟೋವನ್ನು ದಿನಾಂಕ 11.02.2022 ರಂದು ಅಂದರೆ ಈ ದಿನ ತೆಗೆಯಲಾಗಿದೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ಫೋಟೋವನ್ನು ನಿಡಿ–3 ಎಂದು ಗುರುತಿಸಲಾಯಿತು. ಸಾಕ್ಷಿ ಪುನಃ ವಾದಿಯರು ಕೂಲಿ ಕೆಲಸಕ್ಕೆ ಹೋಗಿದ್ದಾಗ ಪ್ರತಿವಾದಿ ಸದರಿ ಫೋಟೋ ತೆಗೆದಿದ್ದಾರೆ ಎನ್ನುತ್ತಾರೆ. ಈ ದಿನ ಪ್ರತಿವಾದಿ ದಾವಾ ಸ್ವತ್ತಿಗೆ ಬಂದು ಫೋಟೋ ತೆಗೆದಿದ್ದಾರೆ ಎಂದು ವಾದಿಯರು ನಿಮಗೆ ಹೇಳಿದ್ದಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಹೇಳಿಲ್ಲ ಮತ್ತು ಅವರು ದಿನ ಕೂಲಿ ಕೆಲಸಕ್ಕೆ ಹೋಗುತ್ತಾರೆ ಹಾಗೂ ದಾವಾ ಸ್ವತ್ತಿನ

ಬಳಿ ಇರುವುದಿಲ್ಲ ಎನ್ನುತ್ತಾರೆ.

8. ದಾವಾ ಸ್ವತ್ತಿನ ಮೇಲೆ ವಾದಿಯರು ಸಾಲ ತೆಗೆದುಕೊಂಡಿದ್ದಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ವಾದಿಯರ ಹೆಸರಿಗೆ ದಾವಾ ಸ್ವತ್ತಿನ ಪಹಣಿ ಇರುವುದನ್ನು ದುರ್ಬಳಕೆ ಮಾಡಿಕೊಂಡು ನಾನು ಅವರ ಹೆಸರಿನಲ್ಲಿ ದಾವಾ ಸ್ವತ್ತನ್ನು ಅಡಮಾನ ಮಾಡಿ ಸಾಲ ಪಡೆದು ವಾದಿಯರಿಗೆ ಮೋಸ ಮಾಡಿದ್ದೇನೆ ಮತ್ತು ಅವರಿಂದ ಜಿ.ಪಿ.ಎ ಪಡೆದು ಈ ದಾವೆಯನ್ನು ನಡೆಸುತ್ತಿದ್ದೇನೆ ಎಂದರೆ ಸರಿ. ವಾದಿಯರು ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಹೊರಬರುತ್ತದೆ ಎಂಬ ಕಾರಣಕ್ಕೆ ನಾನು ಅವರ ಪರವಾಗಿ ಸಾಕ್ಷಿ ವಿಚಾರಣೆಗೆ ಒಳಪಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.–8 ರ ಅಧಿಕಾರ ಪತ್ರವನ್ನು ನಾನೇ ಒತ್ತಾಯದಿಂದ ವಾದಿಯರಿಂದ ಬರೆಸಿಕೊಂಡಿದ್ದೇನೆ ಮತ್ತು ವಾದಿಯರು ಅದನ್ನು ಸ್ವ ಇಚ್ಚೆಯಿಂದ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವ ಇಚ್ಚೆಯಿಂದ ಪ್ರತಿವಾದಿ ಗ್ರಾಮದಲ್ಲಿ ಬಡ್ಡಿ ವ್ಯವಹಾರ ಮಾಡುತ್ತಾರೆ ಮತ್ತು ಸಾಲ ಕೊಟ್ಟ ರೈತರಿಂದ ಜಮೀನಿನ ದಾಖಲೆಯನ್ನು ಬರೆಸಿಕೊಳ್ಳತ್ತಾರೆ ಹಾಗೂ ಆ ರೀತಿ ಬರೆಸಿಕೊಂಡ ಹಲವು ದಾಖಲೆಗಳನ್ನು ಬಳಸಿಕೊಂಡು ಬೇರೆ ಬೇರೆ ನ್ಯಾಯಾಲಯದಲ್ಲಿ ಇನ್ನಿತರ ಪ್ರಕರಣಗಳನ್ನು ದಾಖಲಿಸಿದ್ದಾರೆ ಎನ್ನುತ್ತಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇತರೆ ಪ್ರಕರಣಗಳ ಬಗ್ಗೆ ನನಗೆ ಮಾಹಿತಿ ಇದೆ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಕೊಡುತ್ತೇನೆ.

9. ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿರುವುದರಿಂದ ವಾದಿಯರು ಈ ದಾವೆಯಲ್ಲಿ

ಕೇಳಿರುವ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಅವರ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದಾರೆ ಎಂದು ವ್ಯಾಜ್ಯ ಕಾರಣ ಸೃಷ್ಟಿಮಾಡುವ ಸಲುವಾಗಿ ವಿನಃ ಕಾರಣ ಆರೋಪ ಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಕೆಲಸ ಮಾಡುವುದರಿಂದ ವಾದಿಯರಿಗೆ ನ್ಯಾಯಾ ಕೊಡಿಸುತ್ತೇನೆಂದು ಭರವಸೆ ಕೊಟ್ಟು ಸುಳ್ಳು ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ. ನಾನು ಬೇರೆಯವರ ಪರವಾಗಿ ಜಿ.ಪಿ.ಎ ಪಡೆದು ನ್ಯಾಯಾಲಯದಲ್ಲಿ ಸುಳ್ಳು ಹೇಳುವುದನ್ನೇ ಪ್ರವೃತ್ತಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವ ಇಚ್ಚೆಯಿಂದ ವಾದಿಯರು ನಮ್ಮ ಗ್ರಾಮಸ್ಥರಾಗಿದ್ದು ನಮ್ಮ ಜಮೀನಿಗೆ ಕೆಲಸಕ್ಕೆ ಬರುತ್ತಾರೆ ಮತ್ತು ಅವರಿಗೆ ಅನ್ಯಾಯವಾಗಿದೆ ಎಂದು ಗೊತ್ತಾಗಿದ್ದರಿಂದ ಹಾಗೂ ನಮ್ಮ ಊರಿನಲ್ಲಿ ಬೇರೆ ಯಾರು ಅವರ ಸಹಾಯಕ್ಕೆ ಬರದ ಕಾರಣ ನಾನೇ ವಾದಿಯರ ಪರವಾಗಿ ಜಿ.ಪಿ.ಎ ಪಡೆದು ಸಾಕ್ಷಿ ಹೇಳುತ್ತಿದ್ದೇನೆ ಎನ್ನುತ್ತಾರೆ. ಪ್ರತಿವಾದಿ ವಾದಿಯರಿಗೆ ಅನ್ಯಾಯ ಮಾಡಿದ್ದಾರೆ ಎಂದು ದೂರು ಕೊಟ್ಟಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಪೊಲೀಸರು ದೂರು ತೆಗೆದುಕೊಂಡಿಲ್ಲ ಎನ್ನುತ್ತಾರೆ.

10. ನೊಂದಾಯಿತ ಕ್ರಯ ಕರಾರಿನ ನೇರವೇರಿಕೆಗಾಗಿ ದಿನಾಂಕ 02.08.2022 ರಂದು ಪ್ರತಿವಾದಿ ವಾದಿಯರಿಗೆ ನೋಟಿಸು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ನೋಟಿಸು ವಾದಿಯರಿಗೆ ಖುದ್ದು ಜಾರಿಯಾಗಿದೆ ಎಂದರೆ ಸಾಕ್ಷಿ ಅಂಚೆಯವರು ವಾದಿಯರ ಬಳಿ ಹೋಗಿಲ್ಲ ಮತ್ತು ಒಂದು ವೇಳೆ ನೋಟಿಸು ಜಾರಿಯಾಗಿದ್ದಾರೆ ವಾದಿಯರು ನನಗೆ ಹೇಳುತ್ತಿದ್ದರು ಎನ್ನುತ್ತಾರೆ. ವಾದಿಯರಿಗೆ ನೋಟಿಸು ಜಾರಿಯಾಗಿದ್ದರು ಸಹ ನಾನು ಸುಳ್ಳು

ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನೋಟಿಸಿಗೆ ವಾದಿಯರು ಉತ್ತರ ಕೊಟ್ಟಿಲ್ಲ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಎಲ್ಲಾ ವಿಷಯ ಗೊತ್ತಿದ್ದರೂ ವಾದಿಯ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**